**Form No.4.**

**Deposition Sheet( R.P.52)**

**ಹಿರಿಯ ಸಿವಿಲ್ ನ್ಯಾಯಾಧೀಶರ ಮತ್ತು ಹೆಚ್ಚುವರಿ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಲಯ, ಕಾರ್ಕಳ.**

**M.V.C. Case Number: 353/2018**

**Witness for :PW 2**

| | | |
|---|---|---|
| ಸಾಕ್ಷಿಯ ಹೆಸರು | ಃ | ಡಾ. ಮೋನಪ್ಪ ನಾಯ್ಕು |
| ತಂದೆ ಹೆಸರು | ಃ | ಐತು ನಾಯ್ಕು |
| ಪ್ರಾಯ | ಃ | 48 ವರ್ಷ |
| ಉದ್ಯೋಗ | ಃ | ಅಸಿಸ್ಟೆಂಟ್ ಪ್ರೋಫೆಸರ್ ಅರ್ಥೋಪೆಡಿಕ್ಸ್, ಕೆಎಂಸಿ ಆಸ್ಪತ್ರೆ, ಮಣಿಪಾಲ |
| ವಾಸ | ಃ | ಮಣಿಪಾಲ |

ದಿನಾಂಕಃ 16.02.2018 ಪಿಡಬ್ಲ್ಯೂ -2 ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಮಾಡಿಸಲಾಯಿತು.

<u>ಮುಖ್ಯ ವಿಚಾರಣೆಃ</u> ಶ್ರೀ ಕೆ ಕೆ ಎಸ್ ಅರ್ಜಿದಾರರ ಪರ ವಕೀಲರಿಂದಃ

1. ನಾನು ಈ ಕೇಸಿನ ಸಾಕ್ಷಿದಾರ. ನ್ಯಾಯಾಲಯದ ಸಮನ್ಸ್ ಮೇರೆಗೆ ಈ ಕೇಸಿನಲ್ಲಿ ಹಾಜರಾಗಿದ್ದೇನೆ. ನನ್ನ ಮುಖ್ಯ ವಿಚಾರಣೆಯ ಬದಲಿಗೆ ನಾನು ಈ ದಿನ ನ್ಯಾಯಾಲಯಕ್ಕೆ ಪ್ರಮಾಣ ಪತ್ರವನ್ನು ಸಲ್ಲಿಸುತ್ತಿದ್ದು , ಸದರಿ ಪ್ರಮಾಣ ಪತ್ರದಲ್ಲಿ ತಿಳಿಸಿರುವ ಅಂಶಗಳು ಸತ್ಯವಾಗಿವೆ.

2. ಅರ್ಜಿದಾರರು ನಮ್ಮ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದ ಬಗ್ಗೆ ಅವರಿಗೆ ಸಂಬಂಧಿಸಿದ ಕೇಸ್ ಶೀಟ್‌ನ್ನು ಹಾಜರುಪಡಿಸಿದ್ದು , ನಿಪಿ-1 ಎಂದು ಗುರುತಿಸಲಾಯಿತು.

ಅರ್ಜಿದಾರರನ್ನು ಪರಿಶೀಲಿಸಿ ನೀಡಿರುವ ಅಂಗನ್ಯೂನ್ಯತಾ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು, ನಿಪಿ-2 ಎಂದು ಗುರುತಿಸಲಾಯಿತು. ಅದರಲ್ಲಿ ನನ್ನ ಹಾಗೂ ಡಾಃ ಶರತ್ ಕೆ ರಾವ್ ರವರ ಸಹಿಗಳು ಇವೆ. ನಿಪಿ-21 ನ್ನು ನಾನೇ ನೀಡಿದ್ದೇನೆ. ಅದರಲ್ಲಿ ನನ್ನ ಸಹಿ ಇದೆ. ಅರ್ಜಿದಾರರಿಗೆ ನೀಡಿರುವ 10 ಎಕ್ಸರೇ ಫಿಲಂಗಳನ್ನು ಹಾಜರುಪಡಿಸಿದ್ದು , ಒಟ್ಟಾಗಿ ನಿಪಿ-3 ಎಂದು ಗುರುತಿಸಲಾಯಿತು.

<u>ಪಾಟೀಸವಾಲುಃ</u> ಶ್ರೀ ಎಂ ಆರ್ ರವರ ಪರವಾಗಿ ಕು. ಡಿ. ಕೆ. 2 ನೇ ಎದುರುದಾರರ ಪರ ವಕೀಲರಿಂದಃ

3. ಅರ್ಜಿದಾರರು ಈಗ ಸಂಪೂರ್ಣವಾಗಿ ಗುಣಮುಖರಾಗಿದ್ದಾರೆ ಎಂದರೆ ಮುರಿದ ಮೂಳೆಗಳು ಕೂಡಿಕೊಂಡಿವೆ. ಅರ್ಜಿದಾರರು ನಮ್ಮ ದಾಖಲೆಗಳ ಪ್ರಕಾರ ಮೀನು ವ್ಯಾಪಾರ ಮಾಡುವವರು. ಅರ್ಜಿದಾರರು ನೀಡಿರುವ ಅಂಗನ್ಯೂನ್ಯತೆಯನ್ನು ಕೇಸ್‌ಶೀಟನಲ್ಲಿ ಕಾಣಿಸಿದ್ದೇನೆ. ಅರ್ಜಿದಾರರಿಗೆ ನೀಡಿರುವ ಅಂಗನ್ಯೂನ್ಯತೆಯನ್ನು ಅವರ ಕೆಲಸವನ್ನು ಆಧರಿಸಿ ನೀಡಿಲ್ಲ. ಅರ್ಜಿದಾರರಿಗೆ ಯಾವುದೇ ಕೆಲಸ ಮಾಡಲು ತೊಂದರೆ ಇಲ್ಲ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಇನ್‌ಪ್ಲ್ಯಾಂಟ್ ಅಳವಡಿಸಿರುವುದನ್ನು ಬಿಟ್ಟರೆ ಬೇರೆ ಯಾವುದೇ ಚಿಕಿತ್ಸೆ ಇಲ್ಲ ಎಂದರೆ ಸರಿ. ಅರ್ಜಿದಾರರಿಗೆ ಭವಿಷ್ಯ ಚಿಕಿತ್ಸೆಗೆ 35 ಸಾವಿರ ರೂ ಅವಶ್ಯಕತೆ ಇಲ್ಲ ಎಂದರೆ ಸರಿಯಲ್ಲ. ಇನ್‌ಪ್ಲ್ಯಾಂಟ್ ನ್ನು ತೆಗೆಯುವುದು ಕಡ್ಡಾಯವಲ್ಲ ಎಂದರೆ ಸರಿಯಲ್ಲ. ಅರ್ಜಿದಾರರು ನಮ್ಮ ಆಸ್ಪತ್ರೆಯಲ್ಲಿ 4 ಬಾರಿ ಒಳರೋಗಿಯಾಗಿ ದಾಖಲಾಗಿದ್ದಾರೆ. ಅರ್ಜಿದಾರರು ಕೊನೆಯ ಬಾರಿ ದಿನಾಂಕಃ 23.11.2018 ರಂದು ಚಿಕಿತ್ಸೆ ಪಡೆದಿದ್ದಾರೆ. ಅರ್ಜಿದಾರರಿಗೆ ನಾನು ಹೇಳಿದಷ್ಟು ಅಂಗನ್ಯೂನ್ಯತೆ ಇಲ್ಲ ಎಂದರೆ ಸರಿಯಲ್ಲ. ಅವರಿಗೆ ಸಹಾಯ ಮಾಡುವ ಉದ್ದೇಶದಿಂದ ಜಾಸ್ತಿ ಅಂಗನ್ಯೂನ್ಯತೆ ತೋರಿಸಿ ಪ್ರಮಾಣಪತ್ರವನ್ನು ನೀಡಿದ್ದೇನೆ ಎಂದರೆ ಸರಿಯಲ್ಲ .

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಎಎಂಎಸಿಟಿ.,

ಕಾರ್ಕಳ .